ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರ ಶೂನ್ಯ ವೇಳೆ ಪ್ರಶ್ನೆಗೆ ಉತ್ತರ.

ವಿಷಯ:- ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ 1996-97ನೇ ಸಾಲಿನಲ್ಲಿ ಉಪನ್ಯಾಸಕರಾಗಿ ನೇಮಕಗೊಂಡು, ಸುಮಾರು 27 ವರ್ಷಗಳ ಕಾಲ ಸುದೀರ್ಘವಾಗಿ ಸೇವೆ ಸಲ್ಲಿಸಿದರೂ ಇದುವರೆವಿಗೂ ಅವರಿಗೆ ಪ್ರಾಂಶುಪಾಲರ ಹುದ್ದೆಗೆ ಬಡ್ತಿ ದೊರೆತಿರುವುದಿಲ್ಲ. ಶೇಕಡ 25% ನೇರ ನೇಮಕಾತಿ ಹಾಗೂ ಶೇಕಡ 75%ರಷ್ಟು ಪ್ರಾಂಶುಪಾಲರ ಹುದ್ದೆಗಳನ್ನು ಬಡ್ತಿ ಮೂಲಕ ಭರ್ತಿ ಮಾಡಬೇಕಾಗಿರುತ್ತದೆ. ಕಳೆದ 12 ವರ್ಷಗಳಿಂದ ನೇರ ನೇಮಕಾತಿಗೆ ಕಾಯ್ದಿರಿಸಿದ ಹುದ್ದೆಗಳನ್ನು ಇದುವರೆವಿಗೂ ಭರ್ತಿ ಮಾಡಿರುವುದಿಲ್ಲ. ಸುಮಾರು 550ಕ್ಕೂ ಹೆಚ್ಚು ಪ್ರಾಂಶುಪಾಲರ ಹುದ್ದೆಗಳು ಖಾಲಿ ಇವೆ. ಖಾಯಂ ಪ್ರಾಂಶುಪಾಲರು ಇಲ್ಲದೆ ಇರುವುದರಿಂದ ಆಡಳಿತ ನಿರ್ವಹಣೆ ಮತ್ತು ಪರೀಕ್ಷಾ ಕಾರ್ಯಗಳಿಗೆ ತುಂಬಾ ಆಡಚಣೆ ಉಂಟಾಗುತ್ತಿದೆ. ಇದರಿಂದಾಗಿ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗೆ ತುಂಬಾ ತೊಂದರೆ ಉಂಟಾಗುತ್ತಿದೆ. ಈ ಸಂಬಂಧ ನಾಲ್ಕು ಬಾರಿ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ ಹಾಗೂ ನಿರ್ದೇಶಕರಿಗೆ ಪತ್ರ ಬರೆದಿರುತ್ತೇನೆ. ಇದುವರೆವಿಗೂ ಪತ್ರಕ್ಕೆ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. ಅಧಿಕಾರಿಗಳ ಉದ್ಧಟತನವನ್ನು ಖಂಡಿಸುತ್ತೇನೆ. ಇಂತಹ ಅಧಿಕಾರಿಗಳಿಂದ ಶಿಕ್ಷಣದಲ್ಲಿ ಸುಧಾರಣೆ ತರಲು ಸಾಧ್ಯವೇ ಇಲ್ಲ, ಎಂಬುವುದನ್ನು ಈ ಮೂಲಕ ಘನ ಸರ್ಕಾರಕ್ಕೆ ತಿಳಿಯಬಯಸುತ್ತೇನೆ.

ಬಹುತೇಕ ಉಪನ್ಯಾಸಕರು ಯಾವುದೇ ಬಡ್ತಿ ಇಲ್ಲದೆ ಉಪನ್ಯಾಸಕರಾಗಿಯೇ ನಿವೃತ್ತಿಯಾಗುತ್ತಿರುವುದು ಅತ್ಯಂತ ವಿಷಾಧನೀಯ ಸಂಗತಿ. ಸದರಿ ವಿಷಯವನ್ನು ಅತಿ ಜರೂರು ಎಂದು ಪರಿಗಣಿಸಿ, ನೇರ ನೇಮಕಾತಿಗೆ ಕಾಯ್ದಿರಿಸಿದ ಹುದ್ದೆಗಳು ಸೇರಿದಂತೆ ದಿನಾಂಕ:30-4-2024ರವರೆಗೂ ಖಾಲಿಯಾಗಲಿರುವ ಪ್ರಾಂಶುಪಾಲರ ಹುದ್ದೆಗಳನ್ನು ಒಳಗೊಂಡಂತೆ ಇದೊಂದು ಬಾರಿಗೆ ತಕ್ಷಣ ಬಡ್ತಿ ಮೂಲಕ ಭರ್ತಿ ಮಾಡುವಂತೆ ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರನ್ನು ಒತ್ತಾಯಿಸುತ್ತೇನೆ.

ಉತ್ತರ :

ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)ಯಲ್ಲಿ, ಪ್ರಾಂಶುಪಾರ ವೃಂದ ಬಲ 1223 ಇರುತ್ತದೆ. ಇದರಲ್ಲಿ 159 ಹುದ್ದೆಗಳು ಕಲ್ಯಾಣ ಕರ್ನಾಟಕ ಕೋಟಾಕ್ಕೆ ಮೀಸಲಿರಿಸಿ, ಉಳಿದ 1064 ಹುದ್ದೆಗಳು ಉಳಿಕೆ ವೃಂದದವರಿಗೆ ಮೀಸಲಿರಿಸಲಾಗಿದೆ. ಸದರಿ ವಿವರಗಳು ಈ ಕೆಳಕಂಡಂತಿದೆ-

| ಕೋಟಾ | SAN | | | WORK | | | VAC | | |
|---|---|---|---|---|---|---|---|---|---|
| | Total | DR | PR | Total | DR | PR | Total | DR | PR |
| ಕಲ್ಯಾಣ ಕರ್ನಾಟಕ ವೃಂದ (ಪ್ರಾದೇಶಿಕ ಕಚೇರಿ & ರಾಜ್ಯ ಮಟ್ಟದ ಕಚೇರಿ (ಬಿಬಿಎಂಪಿ ವ್ಯಾಪ್ತಿ) ಒಳಗೊಂಡಂತೆ) | 159 | 40 | 119 | 83 | - | 83 | 76 | 40 | 36 |
| ಉಳಿಕೆ ವೃಂದ | 1064 | 266 | 798 | 621 | - | 621 | 443 | 266 | 177 |
| ಒಟ್ಟು | 1223 | 306 | 917 | 704 | - | 704 | 519 | 306 | 213 |

ಕಲ್ಯಾಣ ಕರ್ನಾಟಕ ಮತ್ತು ಉಳಿಕೆ ವೃಂದವನ್ನು ಒಳಗೊಂಡಂತೆ 519 ಪ್ರಾಂಶುಪಾಲರ ಹುದ್ದೆಗಳು ಖಾಲಿ ಇರುತ್ತವೆ. ಸದರಿ ಖಾಲಿ ಹುದ್ದೆಗಳಲ್ಲಿ ನೇರ ನೇಮಕಾತಿ ಕೋಟಾಕ್ಕೆ 306 ಹುದ್ದೆಗಳು ಹಾಗೂ ಬಡ್ತಿ ಕೋಟಾದಲ್ಲಿ 213 ಹುದ್ದೆಗಳು ಲಭ್ಯವಾಗುತ್ತವೆ. ಅಲ್ಲದೇ ಮುಂಬರುವ 06 ತಿಂಗಳಲ್ಲಿ 72 ಪ್ರಾಂಶುಪಾಲರ ಹುದ್ದೆಗಳು ಬಡ್ತಿ ಕೋಟಾದಲ್ಲಿ ಖಾಲಿಯಾಗಲಿದ್ದು, ಒಟ್ಟು 285 ಹುದ್ದೆಗಳು ಬಡ್ತಿ ಕೋಟಾದಲ್ಲಿ ಲಭ್ಯವಾಗಲಿವೆ. ಶಾಲಾ ಶಿಕ್ಷಣ ಇಲಾಖೆ (ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ) ಖಾಲಿ ಇರುವ ಪ್ರಾಂಶುಪಾಲರ ಹುದ್ದೆಗೆ ಸದರಿ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿರಿಯ ಉಪನ್ಯಾಸಕರಿಗೆ ಪ್ರಾಚಾರ್ಯರ ಹುದ್ದೆಗೆ ಪ್ರಭಾರದಲ್ಲಿರಿಸುವ ಮೂಲಕ ಆಡಳಿತ ನಿರ್ವಹಣೆ, ಪರೀಕ್ಷಾ ಕಾರ್ಯ ಮತ್ತು ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗೆ ಯಾವುದೇ ತೊಂದರೆಯಾಗದಂತೆ ಕ್ರಮ ವಹಿಸಲಾಗುತ್ತಿದೆ.

ಈ ಮಧ್ಯೆ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆರವರು ದಿನಾಂಕ:14-10-2022ರ ಪತ್ರದಲ್ಲಿ ಪ್ರಾಂಶುಪಾಲರ ಹುದ್ದೆಗೆ ಬಡ್ತಿ ನೀಡಿರುವ ದಿನಾಂಕ:31-10-2016 ರಿಂದ 2022ರವರೆಗೆ ನೀಡಿರುವ ಮುಂಬಡ್ತಿ ಆದೇಶದ ನಡವಳಿಗಳನ್ನು ಸಲ್ಲಿಸುವಂತೆ ಹಾಗೂ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ/178/ಸೇನೇನಿ/2021 ದಿನಾಂಕ:06-11-2021ರಲ್ಲಿನ ಸೂಚನೆಯಂತೆ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ನೌಕರರುಗಳಿಗೆ ಪ್ರಾತಿನಿಧ್ಯತೆಯನ್ನು ಲೆಕ್ಕ ಹಾಕುವ ಸಂದರ್ಭದಲ್ಲಿ ಸ್ವಂತ ಅರ್ಹತೆಯ ಆಧಾರದ ಮೇಲೆ ನೇಮಕಗೊಂಡಿರುವ ನೌಕರರನ್ನು ಮುಂಬಡ್ತಿಗೆ ಪರಿಗಣಿಸುವ ಸಂದರ್ಭದಲ್ಲಿ ಮೀಸಲಾತಿ ಸೌಲಭ್ಯವನ್ನು ಪಡೆಯಲು ಅರ್ಹರಿದ್ದರೂ ಮುಂಬಡ್ತಿಯನ್ನು ನೀಡದೇ ಅನ್ಯಾಯವೆಸಗಿರುವುದರಿಂದ ಇನ್ನು ಮುಂದೆ ನೀಡಲಾಗುತ್ತಿರುವ ಮುಂಬಡ್ತಿಯನ್ನು ಸ್ಥಗಿತಗೊಳಿಸುವಂತೆ ತಿಳಿಸಿದ್ದರು. ಅದರಂತೆಯೇ, ಪ್ರಾಂಶುಪಾಲರ ಹುದ್ದೆಗೆ ನೀಡಲಾಗುವ ಎಲ್ಲಾ ಮುಂಬಡ್ತಿಗಳನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿತ್ತು.

ಇದಲ್ಲದೆ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ವೃಂದದಿಂದ ಪ್ರಾಂಶುಪಾಲರ ವೃಂದಕ್ಕೆ ಮುಂಬಡ್ತಿಯನ್ನು ನೀಡುವಾಗ ಮೀಸಲಾತಿಯನ್ವಯ ರೋಸ್ಟರ್ ಬಿಂದುಗಳನ್ನು ಉಲ್ಲಂಘಿಸಿರುವುದಾಗಿ, ಕೆಲವು ಉಪನ್ಯಾಸಕರುಗಳು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂಖ್ಯೆ:207-227/2020ನ್ನು ದಾಖಲಿಸಿದ್ದರು. ಸದರಿ ಅರ್ಜಿಯನ್ನು ಪರಿಶೀಲಿಸಿ, ಮಾನ್ಯ ನ್ಯಾಯಾಲಯವು ದಿನಾಂಕ:14-08-2023ರಂದು ವಿಲೇಗೊಳಿಸಿರುತ್ತದೆ.

ಪದವಿ ಪೂರ್ವ ಶಿಕ್ಷಣ ಇಲಾಖೆಯ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ವೃಂದದಿಂದ ಪ್ರಾಂಶುಪಾಲರ ವೃಂದಕ್ಕೆ ಮುಂಬಡ್ತಿ ನೀಡುವಲ್ಲಿ ಮೀಸಲಾತಿಯಲ್ಲಿ ಆಗಿರುವ ಅನ್ಯಾಯದ ಬಗ್ಗೆ ಸಮಾಜ ಕಲ್ಯಾಣ ಇಲಾಖೆರವರು ತಪಾಸಣೆ ಕೈಗೊಂಡು ಸಲ್ಲಿಸಿರುವ ವರದಿಯ ಕುರಿತಂತೆ ಸಿಬ್ಬಂದಿ ಮತ್ತು ಆಡಳಿತ ಸುದಾರಣೆ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಹಾಗೂ ಸಂಸದೀಯ ವ್ಯವಹಾರಗಳ ಇಲಾಖೆಯ ಪ್ರತಿನಿಧಿಗಳೊಂದಿಗೆ ವಿವರವಾಗಿ ಚರ್ಚಿಸಲಾಗಿರುತ್ತದೆ. ಈ ಸಂಬಂಧ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಿದ ನಂತರ ಸರ್ಕಾರದ ಆದೇಶ ಸಂಖ್ಯೆ:ಡಿಪಿಎಆರ್ 21 ಎಸ್‌ಬಿಸಿ 1997 ದಿನಾಂಕ:03-02-1999ರನ್ವಯ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಉಪನ್ಯಾಸಕರ ವೃಂದದಿಂದ ಪ್ರಾಂಶುಪಾಲರ ವೃಂದಕ್ಕೆ ನೀಡಲಾಗಿರುವ ಮುಂಬಡ್ತಿಗಳು ನಿಯಮಾನುಸಾರವಿರುವುದಾಗಿ ಸಭೆಯಲ್ಲಿ ನಿರ್ಣಯಿಸಲಾಗಿರುತ್ತದೆ

ಈ ಮೇಲಿನ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಬಡ್ತಿ ಕೋಟಾದಡಿ ಖಾಲಿ ಇರುವ ಮತ್ತು ಖಾಲಿಯಾಗಲಿರುವ ಪ್ರಾಂಶುಪಾಲರ ಹುದ್ದೆಗಳನ್ನು ಅರ್ಹರಾಗಿರುವ ಉಪನ್ಯಾಸಕರಿಂದ ಮುಂಬಡ್ತಿಯ ಮೂಲಕ ತುಂಬುವ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ.

3..

**ನೇರ ನೇಮಕಾತಿಗೆ ಕಾಯ್ದಿರಿಸಿದ ಹುದ್ದೆಗಳನ್ನು ಒಳಗೊಂಡಂತೆ ಒಂದು ಬಾರಿಯ ಕ್ರಮವಾಗಿ ಬಡ್ತಿ ಮೂಲಕ ಭರ್ತಿ ಮಾಡುವ ಬಗ್ಗೆ:-**

1. ಪ್ರಾಂಶುಪಾಲರ ಹುದ್ದೆಗಳ ನೇರ ನೇಮಕಾತಿಗೆ ಸಂಬಂಧಿಸಿದಂತೆ, ಡಾ|| ಉಮಾಶಂಕರ್, ಹಿಂದಿ ಉಪನ್ಯಾಸಕರು ಮತ್ತಿತರರುಗಳು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂಖ್ಯೆ:220-222/2021ನ್ನು ದಾಖಲಿಸಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ:13.07.2021ರ ಆದೇಶದಲ್ಲಿ ಅರ್ಜಿದಾರರ ದಿನಾಂಕ:18-07-2018ರ ಮನವಿಯಲ್ಲಿನ ಅಂಶಗಳನ್ನು ಕಾನೂನಿನನ್ವಯ ಪರಿಶೀಲಿಸಿ ಸೂಕ್ತ ಆದೇಶ ಹೊರಡಿಸುವಂತೆ ನಿರ್ದೇಶಿಸಿರುತ್ತದೆ.
2. ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ:220-222/2021ರಲ್ಲಿನ ದಿನಾಂಕ:13-07-2021ರ ಆದೇಶವನ್ನು ಅನುಷ್ಠಾನಗೊಳಿಸದಿರುವ ಕುರಿತಂತೆ ಅರ್ಜಿದಾರರು ಮಾನ್ಯ ನ್ಯಾಯಾಲಯದಲ್ಲಿ ನ್ಯಾಯಾಲಯ ನಿಂದನಾ ಅರ್ಜಿ ಸಂಖ್ಯೆ:334/2022ನ್ನು ದಾಖಲಿಸಿರುತ್ತಾರೆ. ದಿನಾಂಕ:13-07-2021ರ ಆದೇಶದಲ್ಲಿ ಅರ್ಜಿದಾರರುಗಳ ದಿನಾಂಕ:18-07-2018ರ ಮನವಿಯಲ್ಲಿನ ಅಂಶಗಳನ್ನು ಕಾನೂನಿನನ್ವಯ ಪರಿಶೀಲಿಸಿ, ಮೂರು ತಿಂಗಳೊಳಗಾಗಿ ಸೂಕ್ತ ಆದೇಶ ಹೊರಡಿಸುವಂತೆ ಮಾನ್ಯ ನ್ಯಾಯಾಲಯವು ನಿರ್ದೇಶನವನ್ನು ನೀಡಿತ್ತು. ಅದರಂತೆ ಅರ್ಜಿದಾರರ ಮನವಿಯಲ್ಲಿನ ಅಂಶಗಳನ್ನು ಪರಿಶೀಲಿಸಿ, ಪ್ರಾಂಶುಪಾಲರ ನೇರ ನೇಮಕಾತಿಗೆ ನಿಗದಿಪಡಿಸಿದ ಪರೀಕ್ಷೆಯನ್ವಯ ಬಡ್ತಿ ನೀಡಲು ಕ್ರಮ ವಹಿಸುವುದಾಗಿ ಹಿಂಬರಹ ನೀಡಲಾಗಿತ್ತು.ಅರ್ಜಿದಾರರುಗಳ ಮನವಿಯಲ್ಲಿ ನೇರ ನೇಮಕಾತಿ ಪ್ರಾಂಶುಪಾಲರ ಹುದ್ದೆಗಳ ನೇಮಕಕ್ಕೆ ಸಂಬಂಧಿಸಿದಂತೆ ಪಠ್ಯಕ್ರಮ ಪರಿಷ್ಕರಣೆಯ ಅಂಶವು ಸಹ ಒಳಗೊಂಡಿತ್ತು.
3. ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಪ್ರಾಂಶುಪಾಲ ವೃಂದದಲ್ಲಿ ನೇರ ನೇಮಕಾತಿ ಕೋಟಾದಡಿ ಖಾಲಿ ಹುದ್ದೆಗಳನ್ನು ತುಂಬಿಕೊಳ್ಳಲು ನೇಮಕಾತಿ ಪ್ರಕ್ರಿಯೆ ನಡೆಸಿ, ಅರ್ಹ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಮತ್ತು ಹೆಚ್ಚುವರಿ ಅಭ್ಯರ್ಥಿಗಳ ಪಟ್ಟಿಯನ್ನು ಸಲ್ಲಿಸಲು ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು ಇವರಿಗೆ ತಿಳಿಸಲಾಗಿತ್ತು.

4. ಆದರೆ ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ ಆಇ 03 ಬಿಇಎಂ 2020 .ದಿನಾಂಕ:06-07-2020ರನ್ವಯ ರಾಜ್ಯದಲ್ಲಿ ಕೋವಿಡ್-ನಿಂದ ಉಂಟಾದ ಪರಿಸ್ಥಿತಿಯನ್ನು ಸುಸ್ಥಿತಿಗೆ ತರುವ ನಿಟ್ಟಿನಲ್ಲಿ ಸಂಪನ್ಮೂಲವನ್ನು ಕ್ರೋಢೀಕರಿಸುವುದು ಹಾಗೂ ಸರ್ಕಾರದ ವೆಚ್ಚದ ಬಾಬ್ತಿನಲ್ಲಿ ಮಿತವ್ಯಯ ಪಾಲಿಸುವ ಅವಶ್ಯಕತೆ ಇರುವ ನಿಟ್ಟಿನಲ್ಲಿ 2020-21ನೇ ಸಾಲಿನ ಆರ್ಥಿಕ ವರ್ಷದಲ್ಲಿ ಕಲ್ಯಾಣ ಕರ್ನಾಟಕ ವೃಂದದ ಹುದ್ದೆಗಳು ಮತ್ತು ಬ್ಯಾಕ್‌ಲಾಗ್ ಹುದ್ದೆಗಳೂ ಸೇರಿದಂತೆ ಎಲ್ಲಾ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡುವುದನ್ನು ಮುಂದಿನ ಆದೇಶದವರೆಗೆ ತಡೆಹಿಡಿಯಲು ನಿರ್ದೇಶನ ನೀಡಿದ್ದರಿಂದ ಆ ಅವಧಿಯಲ್ಲಿ ನೇಮಕಾತಿಯನ್ನು ಸ್ಥಗಿತಗೊಳಿಸಲಾಗಿತ್ತು.
5. ಏತನ್ಮಧ್ಯೆ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ ಹುದ್ದೆಗಳ ನೇಮಕಾತಿಗೆ ನಿಗದಿಪಡಿಸಲಾದ ಸ್ಪರ್ಧಾತ್ಮಕ ಪರೀಕ್ಷೆಯ ಪಠ್ಯಕ್ರಮವನ್ನು ಮಾರ್ಪಾಡಿಸಲು ಇಲಾಖೆಯು ನಿರ್ಣಯಿಸಿದ್ದು, ಅದರಂತೆ ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ)ಯ ಜಂಟಿ ನಿರ್ದೇಶಕರ ಮತ್ತು ಪ್ರಾಂಶುಪಾಲರ ವೃಂದಕ್ಕೆ ಸಂಬಂಧಿಸಿದಂತೆ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡುವ ಸಂಬಂಧ ದಿನಾಂಕ:27-04-2022, ದಿನಾಂಕ : 03-08-2022 ಮತ್ತು

ದಿನಾಂಕ:22-09-2023ರ ವೃಂದ ಪರಿಶೀಲನಾ ಸಮಿತಿಯ ಉಪ ಸಮಿತಿ ಸಭೆಯಲ್ಲಿ ಚರ್ಚಿಸಲಾಗಿದ್ದು, ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮಾಲೋಚನೆ ನಡೆಸಿ ಕರಡು ತಿದ್ದುಪಡಿ ನಿಯಮಗಳನ್ನು ತಯಾರಿಸಲಾಗಿರುತ್ತದೆ. ಪ್ರಸ್ತಾಪಿತ ಕರಡು ತಿದ್ದುಪಡಿ ನಿಯಮಗಳನ್ನು ಹೊರಡಿಸಲು ಸಚಿವ ಸಂಪುಟದ ಅನುಮೋದನೆ ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದ್ದು, ಸಚಿವ ಸಂಪುಟದ ಅನುಮೋದನೆ ದೊರೆತ ಕೂಡಲೇ ತಿದ್ದುಪಡಿ ನಿಯಮಗಳನ್ನು ಹೊರಡಿಸಿ, ನೇರ ನೇಮಕಾತಿ ಕೋಟಾದಡಿ ಖಾಲಿ ಇರುವ ಪ್ರಾಂಶುಪಾಲರ ಹುದ್ದೆಗಳನ್ನು ತ್ವರಿತವಾಗಿ ಭರ್ತಿ ಮಾಡಲಾಗುವುದು.

**ಸಂಖ್ಯೆ:ಇಪಿ 233 ಡಿಜಿಡಬ್ಲ್ಯೂ 2023**

(ಎಸ್. ಮಧು ಬಂಗಾರಪ್ಪ)
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.**